# ವಿಶ್ವವಿದ್ಯಾ-ಲಯ?

ವಿಶ್ವವಿದ್ಯಾನಿಲಯಗಳೆಂದರೆ ಜ್ಞಾನದಾಸೋಹದ ಕೇಂದ್ರಗಳೆಂಬ ನಂಬಿಕೆ ಹುಸಿಯಾಗತೊಡಗಿದೆ. ರಾಜ್ಯದ ವಿಶ್ವವಿದ್ಯಾನಿಲಯಗಳ ಹಗರಣಗಳು ಒಂದರ ಹಿಂದೆ ಒಂದರಂತೆ ಬಯಲಿಗೆ ಬರತೊಡಗಿವೆ. ಪ್ರಚ್ಛನ್ನ ಜಾತೀಯತೆ ಮತ್ತು ಭ್ರಷ್ಟಾಚಾರದ ಕೂಪಗಳಾಗಿ ವಿಶ್ವವಿದ್ಯಾನಿಲಯಗಳು ನಾರುತ್ತಿರುವುದು ಶಿಕ್ಷಣ ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆ ಉಂಟು ಮಾಡುವಂತಿದೆ. 'ಉನ್ನತ ಶಿಕ್ಷಣ ಎಂದರೆ ಉನ್ನತ ವಿಚಾರಗಳು' ಎಂಬ ಒಂದು ಕಾಲದ ನಂಬಿಕೆ ಹುಸಿಯಾಗುತ್ತಿದ್ದು, 'ಉನ್ನತ ಶಿಕ್ಷಣ ಎಂದರೆ ಉನ್ನತ ಭ್ರಷ್ಟಾಚಾರ' ಎಂಬಂತೆ ಭಾಸವಾಗತೊಡಗಿದೆ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿನ ಪರಿಸ್ಥಿತಿ ಇನ್ನಷ್ಟು ಹದಗೆಡುವ ಮುನ್ನ ಎಲ್ಲರೂ ಎಚ್ಚೆತ್ತುಕೊಂಡು, ಸೂಕ್ತ ದಾರಿ ತೋರಿಸಬೇಕಿದೆ.

ವಿದ್ಯಾರ್ಥಿಗಳ ಪ್ರವೇಶ, ಅಧ್ಯಾಪಕರ ನೇಮಕ, ಸಿಬ್ಬಂದಿ ಬಡ್ತಿ ಮುಂತಾದ ವಿಷಯಗಳಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳು ನಿಯಮಗಳನ್ನು ಉಲ್ಲಂಘಿಸಿ ಮನಸೋ ಇಚ್ಛೆ ವರ್ತಿಸುತ್ತಿರುವುದು ತೀರಾ ನಿರ್ಲಜ್ಜ ಸಂಗತಿ. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊ. ಶಶಿಧರಪ್ರಸಾದ್ ಅವರ ಕಾಲದಲ್ಲಿ ನಡೆದ ನೇಮಕಾತಿ ಅಕ್ರಮಗಳ ಬಗ್ಗೆ ನಿವೃತ್ತ ನ್ಯಾಯಮೂರ್ತಿ ರಂಗವಿಠಲಾಚಾರ್ ಅವರ ತನಿಖಾ ವರದಿಯೂ ಬಂದಿದ್ದು ಆರೋಪಗಳನ್ನು ದೃಢಪಡಿಸಿದ್ದಾರೆ. ಶಶಿಧರಪ್ರಸಾದ್‌ರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಸರಕಾರವೂ ಆದೇಶಿಸಿದೆ. ಇನ್ನೊಂದೆಡೆ ಬೀದರ್‌ನಲ್ಲಿರುವ ರಾಜ್ಯ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯದಲ್ಲಿ ನಿಯಮಗಳನ್ನು ಗಾಳಿಗೆ ತೂರಿ ನೇಮಕಾತಿ ಹಾಗೂ ಬಡ್ತಿ ನೀಡಿರುವುದನ್ನು ತನಿಖೆ ನಡೆಸಿದ ಪ್ರಾದೇಶಿಕ ಆಯುಕ್ತರು ಪತ್ತೆ ಹಚ್ಚಿದ್ದಾರೆ. ಈ ಬಗ್ಗೆ ಕುಲಾಧಿಪತಿಯಾದ ರಾಜ್ಯಪಾಲರಿಗೂ ವರದಿ ನೀಡಲಾಗಿದೆ. ಅಲ್ಲಿನ ಕುಲಪತಿ ಡಾ.ಸುರೇಶ ಹೊನ್ನಪ್ಪಗೋಳ ಮತ್ತು ಕುಲಸಚಿವ ಶ್ರೀನಿವಾಸಗೌಡ ಈ ಹಗರಣದಲ್ಲಿ ಭಾಗಿಯಾಗಿದ್ದಾರೆಂದು ವರದಿ ಗುರುತಿಸಿದೆ. ದಾವಣಗೆರೆ ವಿ.ವಿ ಯಲ್ಲೂ ನೇಮಕದಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ವರದಿಯಾಗಿವೆ. ಕರ್ನಾಟಕದ ಬಹುತೇಕ ಎಲ್ಲ ವಿ.ವಿ.ಗಳಲ್ಲೂ ಅಕ್ರಮ ನೇಮಕಾತಿ ಮತ್ತು ಬಡ್ತಿಗಳಿಗೆ ಸಂಬಂಧಿಸಿದ ಹಗರಣಗಳು ಆಗಿಂದಾಗ್ಗೆ ವರದಿಯಾಗುತ್ತಿವೆ.

ವಿಶ್ವವಿದ್ಯಾನಿಲಯಗಳ ಪರಿಸ್ಥಿತಿ ಇಷ್ಟೊಂದು ಹದಗೆಡಲು ಮುಖ್ಯ ಕಾರಣ ಜಾತಿ ರಾಜಕೀಯ. ಕುಲಪತಿಗಳ ನೇಮಕದೊಂದಿಗೇ ಜಾತಿ ರಾಜಕೀಯ ಶುರುವಾಗುತ್ತದೆ. ಶಿಕ್ಷಣವೇತ್ತರು, ಜ್ಞಾನಪ್ರಸಾರದ ಹೊಣೆ ಹೊತ್ತವರು ತಮ್ಮ ತಮ್ಮ ಜಾತಿಕೋಟೆಗಳನ್ನು ಕಟ್ಟಿಕೊಂಡು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ, ಅಧ್ಯಾಪಕರಲ್ಲೂ ಗುಂಪುಗಾರಿಕೆಯ ಕೆಟ್ಟಪರಂಪರೆಗೆ ಅಡಿಗಲ್ಲು ಹಾಕುತ್ತಿದ್ದಾರೆ. ಈ ಅಪದ್ಧಗಳನ್ನು ನಿಲ್ಲಿಸಬೇಕಾದರೆ, ತನಿಖೆಯ ಮೂಲಕ ಆರೋಪಿಗಳೆಂದು ಸಾಬೀತಾದವರ ವಿರುದ್ಧ ಕುಲಾಧಿಪತಿಗಳು ಕಠಿಣ ಕ್ರಮಕ್ಕೆ ಮುಂದಾಗಬೇಕು. ಆದರೆ ಹಾಗೆ ಆಗುತ್ತಿಲ್ಲ. ಈ ಹಿಂದೆ ಮಂಗಳೂರು, ಬೆಂಗಳೂರು ವಿ.ವಿ. ಕುವೆಂಪು ವಿ.ವಿ ಮತ್ತು ಹಂಪಿ ವಿ.ವಿ ಗಳಲ್ಲಿ ನಡೆದ ಹಗರಣಗಳ ಬಗ್ಗೆ ಬಂದ ತನಿಖಾ ವರದಿಗಳ ಗತಿ ಏನಾಗಿದೆ? ತಪ್ಪಿತಸ್ಥರು ಮತ್ತೆ ಅದೇ ಜಾತಿ ಮತ್ತು ಹಣದ ಲಾಬಿ ನಡೆಸಿ ಶಿಕ್ಷೆಯಿಂದ ತಪ್ಪಿಸಿಕೊಂಡಿಲ್ಲವೆ? ಈಗ ಮೈಸೂರು ವಿ.ವಿಯ ಹಗರಣದ ತಪ್ಪಿತಸ್ಥರನ್ನು ರಕ್ಷಿಸುವ ಯತ್ನವೂ ನಡೆಯುತ್ತಿದೆ. ಸರಕಾರ ಇಂತಹದ್ದಕ್ಕೆ ಅವಕಾಶ ನೀಡಬಾರದು. ಶಿಕ್ಷಣ ಕ್ಷೇತ್ರದ ಪಾವಿತ್ರ್ಯ ಕೇವಲ ಉದ್ದುದ್ದ ಭಾಷಣಗಳನ್ನು ಮಾಡುವುದರಿಂದ ಉಳಿಯುವುದಿಲ್ಲ. ಭ್ರಷ್ಟತೆಯ ಆರೋಪಗಳು ಬಂದಾಗ ಕಣ್ಣೊರೆಸಲು ತನಿಖೆ ನಡೆಸಿದರಷ್ಟೇ ಸಾಲದು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಸರಕಾರ ನೋಡಿಕೊಂಡರೆ ಮಾತ್ರ ಇನ್ನಷ್ಟು ಅಕ್ರಮಗಳು ನಡೆಯದಂತೆ ತಡೆಯಬಹುದು. ಈ ವಿಚಾರದಲ್ಲಿ ಸರಕಾರ ತಪ್ಪಿ ನಡೆದಲ್ಲಿ ಕುಲಾಧಿಪತಿಗಳು ಅದನ್ನೊಂದು ಗಂಭೀರ ವಿಷಯವನ್ನಾಗಿಸಬೇಕು.

ಜಾತಿ ಅಸಮಾನತೆ ಇಲ್ಲದ, ಭ್ರಷ್ಟಾಚಾರವಿಲ್ಲದ ಸ್ವಸ್ಥ ಸಮಾಜವನ್ನು ಕಟ್ಟುವಲ್ಲಿ ಯುವಪೀಳಿಗೆಯ ಪಾತ್ರ ಮಹತ್ವದ್ದು. ಅಂತಹ ಯುವಪೀಳಿಗೆ ನೈತಿಕವಾಗಿಯೂ ಎಚ್ಚರವಾಗಿರುವಂತೆ ನೋಡಿಕೊಳ್ಳಬೇಕಾದದ್ದು ವಿಶ್ವವಿದ್ಯಾನಿಲಯಗಳ ಹೊಣೆಗಾರಿಕೆ. ಅಷ್ಟೊಂದು ಜವಾಬ್ದಾರಿಯುಳ್ಳ ಕುಲಪತಿಗಳು, ಕುಲಸಚಿವರೇ ಅನೈತಿಕ ದಾರಿ ತುಳಿದರೆ ವಿಶ್ವವಿದ್ಯಾನಿಲಯಗಳು ರೋಗಗ್ರಸ್ತವಾಗದಂತೆ ತಡೆಯುವುದು ಹೇಗೆ? ಹಿಂದೆಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಅಗತ್ಯವಾದ ವಿಷಯಗಳ ಮಹತ್ವದ ಚರ್ಚೆಯೂ ನಡೆಯುತ್ತಿದ್ದವು. ಸಾಮಾಜಿಕ ನ್ಯಾಯದ ವಿಷಯದಲ್ಲಿ, ಅಭಿವೃದ್ಧಿಯ ಅವಲೋಕನದಲ್ಲಿ ಸರಕಾರಗಳಿಗೇ ಮಾರ್ಗದರ್ಶನ ಮಾಡುವಂತಹ ಪ್ರತಿಭಾವಂತ ಶಿಕ್ಷಣವೇತ್ತರು, ಬುದ್ಧಿಜೀವಿಗಳು, ಪ್ರಾಜ್ಞರು ವಿಶ್ವವಿದ್ಯಾನಿಲಯಗಳಲ್ಲಿ ಇರುತ್ತಿದ್ದರು. ಸಮಾಜದ ಉನ್ನತಿಯ ಕಾರ್ಯಯೋಜನೆಗಳ ವಿಮರ್ಶೆ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗಳ ಚರ್ಚೆಯ ಮೂಲಕ ಬಲಗೊಳ್ಳುತ್ತಿದ್ದವು.

ಈಗ ಅಂತಹ ವಾತಾವರಣವೂ ಇಲ್ಲ. ಹೆಚ್ಚು ಹಣ ಗಳಿಸುವ ಉದ್ಯೋಗಕ್ಕೆ ಸೇರಲು ಬೇಕಾದ ಅರ್ಹತೆಯನ್ನು ಒದಗಿಸುವ ಕೇಂದ್ರವಾಗಿಯಷ್ಟೇ ವಿಶ್ವವಿದ್ಯಾನಿಲಯಗಳು ಉಳಿದುಕೊಂಡಿವೆ. ಅಲ್ಲೂ ಜಾತೀಯತೆ, ಸ್ವಜನ ಪಕ್ಷಪಾತ, ಹಣದ ದಾಹಗಳೇ ವಿಜೃಂಭಿಸಿದರೆ ಉಳಿದ ದಾರಿ ಯಾವುದು?

■ ಬಿ.ಎಂ. ಹನೀಫ್

ಜಾತಿಕೋಟೆಗಳನ್ನು ಕಟ್ಟಿಕೊಂಡು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ, ಅಧ್ಯಾಪಕರಲ್ಲೂ ಗುಂಪುಗಾರಿಕೆಯ ಕೆಟ್ಟಪರಂಪರೆಗೆ ಅಡಿಗಲ್ಲು ಹಾಕುತ್ತಿದ್ದಾರೆ. ಈ ಅಪದ್ಧಗಳನ್ನು ನಿಲ್ಲಿಸಬೇಕಾದರೆ, ತನಿಖೆಯ ಮೂಲಕ ಆರೋಪಿಗಳೆಂದು ಸಾಬೀತಾದವರ ವಿರುದ್ಧ ಕುಲಾಧಿಪತಿಗಳು ಕಠಿಣ ಕ್ರಮಕ್ಕೆ ಮುಂದಾಗಬೇಕು. ಆದರೆ ಹಾಗೆ ಆಗುತ್ತಿಲ್ಲ. ಈ ಹಿಂದೆ ಮಂಗಳೂರು ವಿ.ವಿ, ಬೆಂಗಳೂರು ವಿ.ವಿ, ಕುವೆಂಪು ವಿ.ವಿ, ಮತ್ತು ಹಂಪಿ ವಿ.ವಿ ಗಳಲ್ಲಿ ನಡೆದ ಹಗರಣಗಳ ಬಗ್ಗೆ ಬಂದ ತನಿಖಾ ವರದಿಗಳ ಗತಿ ಏನಾಗಿದೆ?



ವಿಷ್ಣು